# ಹುಲಿಕೆರೆಯ ಕಲಾತ್ಮಕ ಕಲ್ಯಾಣಿ

**ಹಾಸನ ಜಿಲ್ಲೆ ಹುಲಿಕೆರೆಯಲ್ಲಿನ ಕಲ್ಯಾಣಿ ತನ್ನ ಕಲಾತ್ಮಕ ಚೌಕಟ್ಟಿನಿಂದ ಸಹೃದಯರ ಗಮನಸೆಳೆಯುತ್ತದೆ. ಇತಿಹಾಸದ ಕಥನಗಳೂ ಈ ಕಲ್ಯಾಣಿಯನ್ನು ಆವರಿಸಿಕೊಂಡಿವೆ.**

**■ ಡಾ. ಪದ್ಮಿನಿ ನಾಗರಾಜು**



ಹಾಸನ ಜಿಲ್ಲೆಯ ಹೆಮ್ಮೆ ಹುಲಿಕೆರೆಯ ಈ ಕಲ್ಯಾಣಿ. ಚಿತ್ರಕೃಪೆ: ವಿಕಿ ಕಾಮನ್ಸ್

ಕಲ್ಯಾಣಿಗಳು ಜೀವಜಲದ ಮೂಲ ಸೆಲೆಗಳು ಎಂಬುದನ್ನು ಅರಿತುಕೊಂಡಿದ್ದ ನಮ್ಮ ಪೂರ್ವಿಕರು ಅವುಗಳನ್ನು ದೇವಸ್ಥಾನದೊಂದಿಗೆ ನಿರ್ಮಿಸಿದ್ದರು. 'ಮನೆಗೊಂದು ಬಾವಿ, ಊರಿಗೊಂದು ಕೆರೆ'ಯ ಅವಶ್ಯಕತೆಯನ್ನು ಮನಗಂಡಿದ್ದ ನಮ್ಮ ಹಿರಿಯರು ಅವುಗಳನ್ನು ತಮ್ಮ ಊರಿನಲ್ಲಿ ನಿರ್ಮಿಸುವುದರ ಮೂಲಕ ನೀರಿನ ಸಮಸ್ಯೆಯನ್ನು ಸಹಜವಾಗಿ ಪರಿಹರಿಸಿಕೊಂಡಿದ್ದರು.

ಪುಣ್ಯಕ್ಷೇತ್ರಗಳಲ್ಲಿ ಸ್ವಚ್ಛ ನೀರಿನ ಮೂಲವಾದ ಕಲ್ಯಾಣಿಗಳನ್ನು ನಿರ್ಮಿಸುವ ಮೂಲಕ ನೀರಿನ ಹಾಹಾಕಾರವನ್ನು ಸಹಜವಾಗಿ ಪರಿಹರಿಸಿದ್ದರು. ಈ ಕಲ್ಯಾಣಿಗಳಿಂದ ಜನ ಜಾನುವಾರುಗಳಿಗೆ ನೀರು ಸಿಗುವುದಷ್ಟೇ ಅಲ್ಲದೆ, ಅವರು ನಂಬಿರುವ ದೈವದ ಅಭಿಷೇಕಕ್ಕೂ ಕಲ್ಯಾಣಿಯ ನೀರು ಬಳಕೆಯಾಗುತ್ತಿತ್ತು.

ಅನೇಕ ರಾಜರು ತಮ್ಮ ಕಾಲಘಟ್ಟದಲ್ಲಿ ಕಲಾತ್ಮಕವಾದ ಕಲ್ಯಾಣಿಗಳನ್ನು ಕಟ್ಟಿಸಿದ್ದಾರೆ. ಶಿಲ್ಪಕಲೆ, ವಾಸ್ತು, ರಾಶಿ–ನಕ್ಷತ್ರಗಳ ಆಧಾರದ ಮೇಲೆಯೂ ಅದ್ಭುತವಾದ ಕಲ್ಯಾಣಿಗಳು ನಿರ್ಮಾಣವಾಗಿವೆ. ಗುಜರಾತ್ ಮತ್ತು ರಾಜಸ್ಥಾನಕ್ಕೆ ನಾವು ಪ್ರವಾಸ ಹೋಗಿದ್ದಾಗ ಇಂತಹ ಕಲ್ಯಾಣಿಗಳನ್ನು ನೋಡುವ ಭಾಗ್ಯ ಒದಗಿತ್ತು. ಆದರೆ, ಬಹಳಷ್ಟು ಕಲ್ಯಾಣಿಗಳು ಸರ್ಕಾರಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿ ಮಲೆತ ನೀರಿನ ಕೊಳೆತ ಸಾಮಾನು ತೇಲುವ ಕೊಚ್ಚೆಗುಂಡಿಗಳಾಗಿದ್ದವು. ಇನ್ನು ಕೆಲವನ್ನು ಸರ್ಕಾರ ಅದ್ಭುತವಾಗಿ ಸಂರಕ್ಷಿಸಿತ್ತು. ಅಂತಹ ಅದ್ಭುತ ಕಲ್ಯಾಣಿಗಳು ಕರ್ನಾಟಕದಲ್ಲಿಯೂ ಇವೆ.

ಕೆಲವು ಸ್ವಯಂಸೇವಾ ಸಂಘಗಳು ತಮ್ಮೂರಿನ ಕೊಳೆತು ನಾರುತ್ತಿದ್ದ ಕಲ್ಯಾಣಿಗಳನ್ನು ಜನರ ಸಹಾಯದಿಂದ ಸ್ವಚ್ಛಗೊಳಿಸಿ ನೀರಿನ ಮೂಲವನ್ನು ಪುನರ್‌ಸ್ಥಾಪಿಸಿದ್ದಾರೆ. ಹಂಪಿಯ ಮಹಾನವಮಿ ವೇದಿಕೆ ಬಳಿ ಸಿಕ್ಕ ಪುಷ್ಕರಣಿಯ ಸೌಂದರ್ಯವನ್ನು ನೋಡಿಯೇ ಸಂತೋಷಿಸಬೇಕು. ಅಂತಹದ್ದೇ ಕಲಾತ್ಮಕವಾದ ಹುಲಿಕೆರೆ ಕಲ್ಯಾಣಿಯನ್ನು ನೋಡಲು ಹಾಸನ ಜಿಲ್ಲೆಗೆ ಬರಬೇಕು.

ಜಗತ್ತಿನಾದ್ಯಂತ ಲಕ್ಷಾಂತರ ಆಸಕ್ತ ಪ್ರವಾಸಿಗರು ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳಕ್ಕೆ ಬರುತ್ತಾರೆ. ಬೇಲೂರು ಮತ್ತು ಹಳೇಬೀಡಿನ ಕುಸುರಿ ಕೆಲಸ, ಕಲಾತ್ಮಕ ಶಿಲ್ಪಗಳನ್ನು, ದೇವಾಲಯಗಳನ್ನು ನೋಡುತ್ತಾರೆ. ಇಲ್ಲಿನ ವಾಸ್ತುಶಿಲ್ಪಗಳನ್ನು ಕಣ್ಣು ತುಂಬಿಕೊಳ್ಳುತ್ತಾರೆ. ಈ ಜಿಲ್ಲೆಯಲ್ಲಿನ ಅನೇಕ ಊರುಗಳಲ್ಲಿ ಹೊಯ್ಸಳರ ಕಾಲದ ಶಿಲ್ಪಕಲೆಗಳು, ಕೊಳ, ಗುಡಿ, ಮಂಟಪಗಳು ನೂರಾರಿದ್ದು, ಅವು ಸರ್ಕಾರದ, ಸ್ಥಳೀಯರ ನಿರ್ಲಕ್ಷ್ಯಕ್ಕೆ ಒಳಪಟ್ಟಿವೆ. ಪ್ರವಾಸಿಗರನ್ನು ಹೆಚ್ಚು ಆಕರ್ಷಿಸದ ಸ್ಥಳಗಳಲ್ಲಿ ಹುಲಿಕೆರೆ ಕಲ್ಯಾಣಿಯೂ ಒಂದು. ಹಳೇಬೀಡಿನಿಂದ ಹಗರೆ ರಸ್ತೆಯಲ್ಲಿ ಎರಡು ಕಿಲೋ ಮೀಟರ್ ರಸ್ತೆಯಲ್ಲಿ ಹುಲಿಕೆರೆಯಿದೆ. ಅಲ್ಲಿಂದ ಎರಡು ಕಿಲೋ ಮೀಟರ್ ಅಂತರದಲ್ಲಿ ಹಳೇಬೀಡಿದೆ.

ಹುಲಿಕೆರೆ ಗ್ರಾಮವು ಹೊಯ್ಸಳ ದೊರೆಗಳ ಹಿಂದಿನ ರಾಜಧಾನಿಯಾಗಿದ್ದ ದ್ವಾರಸಮುದ್ರದ ಭಾಗವಾಗಿತ್ತು. ಗ್ರಾಮದ ಕಿರಿದಾದ ರಸ್ತೆಯಲ್ಲಿ ಸಾಗಿ ಮುಂದೆ ಹೋದರೆ ಆರ್ಕಿಯಾಲಜಿ ವಿಭಾಗದವರು ಸ್ವಚ್ಛಗೊಳಿಸಿರುವ ಅದ್ಭುತ ಶಿಲ್ಪಕಲೆಯನ್ನು ಹೊಂದಿರುವ ಕಲ್ಯಾಣಿಯನ್ನು ಕಾಣಬಹುದು. ನಾಲ್ಕು ಕಡೆ ಮೆಟ್ಟಿಲಿರುವ ಇದು ಮೂರು ಹಂತಗಳನ್ನು ಹೊಂದಿದೆ. ಇಲ್ಲಿ ವಾಸ್ತುಶಿಲ್ಪ ಹಾಗೂ ಖಗೋಳಶಾಸ್ತ್ರವನ್ನು ಅನುಸರಿಸಿ 27 ಅಲಂಕೃತ ಪುಟ್ಟ ಗುಡಿಗಳಿವೆ. ಇವು 27 ನಕ್ಷತ್ರಗಳನ್ನು ಪ್ರತಿನಿಧಿಸುತ್ತವೆ ಎಂದು ನಂಬಲಾಗಿದೆ. ಇವೆಲ್ಲಾ ಗರ್ಭಗುಡಿಯಾಗಿದ್ದು ಇಲ್ಲಿ ಆಯಾ ಮಳೆ ನಕ್ಷತ್ರಗಳ ಸಂಬಂಧಿಸಿದ ದೇವರುಗಳನ್ನು ಪ್ರತಿಷ್ಠಾಪಿಸಲಾಗಿತ್ತು ಎಂದೂ ಪ್ರತೀತಿಯಿದೆ.



ಸಂರಕ್ಷಣೆಯಿಲ್ಲದೆ ಬಯಲಿನಲ್ಲಿ ಅನಾಥವಾಗಿರುವ ಮೂರ್ತಿಗಳು. ಚಿತ್ರಕೃಪೆ: ವಿಕಿ ಕಾಮನ್ಸ್